# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ.

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

| | |
|---|---|
| ಪತ್ರ ಸಂಖ್ಯೆ: ಕಾನಿಇಂ(ವಿ)/ಕೆಂವಿ/ಸಕಾಇಂ(ಕ)/ಕಿಇಂ(ತಾಂ)/23-24/<br>ದಿನಾಂಕ: 07 MAR 2024 9964-65<br>ಲಗತ್ತು: | ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರ ಕಛೇರಿ,<br>ಕೆಂಗೇರಿ ವಿಭಾಗ, ಮೈಸೂರು ರಸ್ತೆ,<br>ಕೆಂಗೇರಿ, ಬೆಂಗಳೂರು – 560060<br>ಮೊ: 94498 77033<br>ಈ ಮೇಲ್: eekengeri.work5@gmail.com. |

**ಗೆ,**

ಮೆ.ವಿ2 ಹೋಲ್ಡಿಂಗ್ಸ್ ಹೌಸಿಂಗ್ ಡೆವಲಪ್‌ಮೆಂಟ್ ಪ್ರವೇಟ್ ಲಿಮಿಟೆಡ್,
ಪ್ರತಿನಿಧಿಸುವವರು ಶ್ರೀ ಪಿ.ಎಲ್ ವೆಂಕಟರಮಣ್ಣ ರೆಡ್ಡಿ,
ಸರ್ವೇ ನಂ. 81/1, 84/2, 84/3, 84/5 ಮತ್ತು 84/8,
ಖಾತ ನಂ.4292, ಉತ್ತರಹಳ್ಳಿ ರಸ್ತೆ, ಕೆಂಗೇರಿ ಗ್ರಾಮ,
ಕೆಂಗೇರಿ ಹೋಬಳಿ, ಬೆಂಗಳೂರು.

**ಮಾನ್ಯರೆ,**

**ವಿಷಯ:** ಮೆ.ವಿ2 ಹೋಲ್ಡಿಂಗ್ಸ್ ಹೌಸಿಂಗ್ ಡೆವಲಪ್‌ಮೆಂಟ್ ಪ್ರವೇಟ್ ಲಿಮಿಟೆಡ್, ಪ್ರತಿನಿಧಿಸುವವರು ಶ್ರೀ ಪಿ.ಎಲ್ ವೆಂಕಟರಮಣ್ಣ ರೆಡ್ಡಿ, ಸರ್ವೇ ನಂ. 81/1, 84/2, 84/3, 84/5 ಮತ್ತು 84/8, ಖಾತ ನಂ.4292, ಉತ್ತರಹಳ್ಳಿ ರಸ್ತೆ, ಕೆಂಗೇರಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪ್ರಸ್ತಾವಿತ ವಸತಿ ಸಮುಚ್ಚಯಕ್ಕೆ 424ಕೆ.ವಿ.ಎ ವಿದ್ಯುತ್ ಸರಬರಾಜು ನೀಡಲು ನಿರಾಪೇಕ್ಷಣಾ ಪತ್ರ **(NOC)** ನೀಡುವ ಬಗ್ಗೆ.

**ಉಲ್ಲೇಖ:** ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)., ಕೆ1 ಉಪವಿಭಾಗ ರವರ ಪತ್ರ ಸಂಖ್ಯೆ: 6365 ದಿನಾಂಕ:21.02.2024.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆ.ವಿ2 ಹೋಲ್ಡಿಂಗ್ಸ್ ಹೌಸಿಂಗ್ ಡೆವಲಪ್‌ಮೆಂಟ್ ಪ್ರವೇಟ್ ಲಿಮಿಟೆಡ್, ಪ್ರತಿನಿಧಿಸುವವರು ಶ್ರೀ ಪಿ.ಎಲ್ ವೆಂಕಟರಮಣ್ಣ ರೆಡ್ಡಿ, ಸರ್ವೇ ನಂ. 81/1, 84/2, 84/3, 84/5 ಮತ್ತು 84/8, ಖಾತ ನಂ.4292, ಉತ್ತರಹಳ್ಳಿ ರಸ್ತೆ, ಕೆಂಗೇರಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪ್ರಸ್ತಾವಿತ ವಸತಿ ಸಮುಚ್ಚಯಕ್ಕೆ 424 ಕೆ.ವಿ.ಎ ವಿದ್ಯುತ್ ಸರಬರಾಜು ನೀಡಲು **ನಿರಾಪೇಕ್ಷಣಾ ಪತ್ರ**(NOC)ಯನ್ನು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ನೀಡಲಾಗಿದೆ.

1) ನಿಮ್ಮ ಪ್ರಸ್ತಾವಿತ ವಸತಿ ಸಮ್ಮುಚ್ಛಯಕ್ಕೆ ಆರ್.ಆರ್.ನಗರ 66/11 ಕೆವಿ ವಿದ್ಯುತ್ ಉಪಕೇಂದ್ರದ ಎಫ್-05 ಫೀಡರ್ ನಿಂದ 400 ಮೀಟರ್, 3*95 ಹೆಚ್.ಟಿ ಭೂಗತ ಕೇಬಲ್ ವಿಸ್ತರಿಸಿ, 4ವೇ. ನಾನ್ ದಾಸ್ ಆರ್.ಎಂ.ಯು ಅಳವಡಿಸಿ, 2*250ಕೆವಿಎ ಪರಿವರ್ತಕವನ್ನು ಅಳವಡಿಸಿ ವಸತಿ ಸಮ್ಮುಚ್ಛಯ ವಿದ್ಯುತ್ ಸಂಪರ್ಕ ನೀಡಲು ಪ್ರಸ್ತಾವಿಸಲಾಗಿದೆ.
2) 11 ಕೆವಿ ಮತ್ತು ಇತರ ಮೂಲಸೌಕರ್ಯಗಳನ್ನು ಕಲ್ಪಿಸುವ ಪರ್ಯಾಯ ಮಾರ್ಗದ ಕೆಲಸವನ್ನು ಸರ್ಕಾರದ ಅನುಮತಿ ಪಡೆದ ಒಂದನೇ ದರ್ಜೆ ಗುತ್ತಿಗೆದಾರರಿಂದ, ಸ್ವಯಂ ಕಾರ್ಯ ಯೋಜನೆಯಡಿಯಲ್ಲಿ ಮೇಲ್ವಿಚಾರಣಾ ಶುಲ್ಕಗಳನ್ನು ಪಾವತಿಸಿ ನಿರ್ವಹಿಸಬೇಕು.
3) ನಿಮ್ಮ ಪ್ರಸ್ತಾವಿತ ವಸತಿ ಸಮುಚ್ಛಯದ ಉದ್ದೇಶಕ್ಕೆ ಹೆಚ್ಚುವರಿ ವಿದ್ಯುತ್ ಸರಬರಾಜನ್ನು ಅರ್ಜಿ ಸಲ್ಲಿಸುವಾಗ ಇರುವ ಬೆ.ವಿ.ಕಂ. ವಿದ್ಯುತ್ ಸರಬರಾಜು ನಿಯಮಗಳ ಪ್ರಕಾರ ನೀಡಲಾಗುವುದು.
4) ನಿಮ್ಮ ಪ್ರಸ್ತಾವಿತ ವಸತಿ ಉದ್ದೇಶಕ್ಕೆ ಬೆ.ವಿ.ಕಂ. ಮಾರ್ಗ ಹಾದುಹೋಗಿದ್ದರೆ, ವಿದ್ಯುತ್ ಸಂಪರ್ಕ ಪಡೆಯುವ ಮುನ್ನ ಅವುಗಳನ್ನು ನಿಮ್ಮ ಸ್ವಂತ ಖರ್ಚಿನಲ್ಲಿ ಆವರಣದ ಹೊರಗೆ ಸ್ಥಳಾಂತರಿಸಬೇಕು.

5) ನಿಮ್ಮ ಪ್ರಸ್ತಾವಿತ ವಸತಿ ಸಮುಚ್ಛಯದ ಉದ್ದೇಶಕ್ಕೆ ಇ.ಹೆಚ್.ಟಿ. ಮಾರ್ಗವು ಹಾದುಹೋಗಿದ್ದಲ್ಲಿ, ವಿದ್ಯುತ್ ಸಂಪರ್ಕ ಪಡೆಯುವ ಮುನ್ನ ಸಂಬಂಧಪಟ್ಟ ಪ್ರಾಧಿಕಾರದಿಂದ ಪ್ರತ್ಯೇಕ ನಿರಾಪೇಕ್ಷಣಾ ಪತ್ರ (NOC) ಪಡೆಯಬೇಕು ಮತ್ತು IE ನಿಯಮದ ಪ್ರಕಾರ ಸೂಕ್ತ ಕಾರಿಡಾರ್ ಲಭ್ಯವಿರುವಂತೆ ನೋಡಿಕೊಳ್ಳಬೇಕು.

6) ಈ ನಿರಾಪೇಕ್ಷಣಾ ಪತ್ರ (NOC) ವನ್ನು ತಮ್ಮ ಕೋರಿಕೆಯಂತೆ ನಕ್ಷೆ ಮಂಜೂರಾತಿಗಾಗಿ ನೀಡಲಾಗಿದೆಯೇ ಹೊರತು, ಬೆ.ವಿ.ಕಂ. ವತಿಯಿಂದ ವಿದ್ಯುತ್ ಸರಬರಾಜಿನ ಕರಾರು ಅಲ್ಲ. ವಿದ್ಯುತ್ ಸರಬರಾಜಿಗಾಗಿ ಅರ್ಜಿ ಸಲ್ಲಿಸುವಾಗ ಇರುವ KERC ಮತ್ತು ಬೆ.ವಿ.ಕಂ ವಿದ್ಯುತ್ ಸರಬರಾಜು ನಿಯಮಗಳ ಪ್ರಕಾರ ನೀಡಲಾಗುವುದು.

7) ಈ ನಿರಾಪೇಕ್ಷಣಾ ಪತ್ರ (NOC) ನೀಡಿಕೆಯಿಂದ ಉದ್ಭವವಾಗುವ ಯಾವುದೇ ವಿವಾದಗಳಿಗೆ ಬೆ.ವಿ.ಕಂ. ಜವಾಬ್ದಾರಿಯಾಗಿರುವುದಿಲ್ಲ.

8) ನೀವು ಪ್ರಸ್ತಾವಿತ ವಸತಿ ಸಮ್ಮುಚ್ಛಯಕ್ಕೆ ವಿದ್ಯುತ್ ಸರಬರಾಜಿಗಾಗಿ ಅರ್ಜಿ ಸಲ್ಲಿಸುವಾಗ, ಈ ನಿರಾಪೇಕ್ಷಣಾ ಪತ್ರ (NOC) ವನ್ನು ಜೊತೆಯಲ್ಲಿ ಸಲ್ಲಿಸಬೇಕು.

9) ಈ ನಿರಾಪೇಕ್ಷಣಾ ಪತ್ರ (NOC) ದ ಅವಧಿಯು, ಈ ಪತ್ರದ ದಿನಾಂಕದಿಂದ ಎರಡು ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ.

10) ಕಾರ್ಯ ವ್ಯವಹರಣಾ ಶುಲ್ಕವಾಗಿ 1*5900/-ರೂ. ಗಳನ್ನು ರಸೀದಿ ಸಂಖ್ಯೆ 437618763951 ದಿನಾಂಕ: 02.02.2024 ರ ಮೂಲಕ ಪಾವತಿಸಿಕೊಳ್ಳಲಾಗಿದೆ.

11) ಪ್ರಸ್ತಾವಿತ ವಸತಿ ಸಮುಚ್ಚಯದಲ್ಲಿ ಬೆ.ವಿ.ಕಂ. ಸ್ಥಾವರಗಳೇನಾದರು ಇದ್ದರೆ, 11 ಕೆವಿ ಮೂಲ ಸೌಕರ್ಯಗಳ ಕೆಲಸವನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಸರೆಂಡರ್ ಮಾಡಬೇಕು.

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜಿನಿಯರ್ (ವಿ).,
ಕೆಂಗೇರಿ ವಿಭಾಗ, ಬೆ.ವಿ.ಕಂ, ಬೆಂಗಳೂರು-60.

ಪ್ರತಿ.

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೆ-1 ಉಪ ವಿಭಾಗ, ಕೆಂಗೇರಿ, ಬೆಂಗಳೂರು ರವರಿಗೆ ಕಡತದೊಂದಿಗೆ ಮಾಹಿತಿಗಾಗಿ.
2. ಸ.ಇಂ(ತಾ)/ಮು.ಕ.